

ಡಾ.ವಿನೋದ ಛೆಬ್ಬಿ

ಸಂಗಾತಿಗಳು ಹೊಂದಿರುವ ಕೊರತೆ, ದೌರ್ಬಲ್ಯಗಳು ಪರಸ್ಪರ ಪೂರಕವಾಗಬಲ್ಲುವೆ?

# 87: ಜಿಜ್ಞಾಸೆಯ ಬೆನ್ನಟ್ಟಿ...

ಲೋಚನ್, ಲೂಸಿ ತಮ್ಮ ಬಿರುಕುಬಿಡುತ್ತಿರುವ ದಾಂಪತ್ಯವನ್ನು ನನ್ನ ಮುಂದಿಟ್ಟು ಕುಳಿತಿದ್ದರು. ಪ್ರೀತಿಯ ಹೆಸರಲ್ಲಿ ಬೆಸುಗೆ ಹಾಕಿಕೊಂಡು, ತನ್ನ ಕೊರತೆಯನ್ನು ನೀಗಿಸಿಕೊಳ್ಳಲು ಸಂಗಾತಿಯನ್ನು ಆಗ್ರಹಿಸುತ್ತಿದ್ದುದನ್ನು ಇಬ್ಬರಿಗೂ ಮನವರಿಕೆ ಮಾಡಿಕೊಟ್ಟು ಅವರ ಮುಖಗಳನ್ನು ಓದುತ್ತಿದ್ದೆ.

ಲೋಚನನ ಮುಖದಲ್ಲಿ ಸಂದೇಹದ ಗೆರೆ ಕಾಣಿಸಿಕೊಂಡಿತು. ಅದನ್ನು ನೋಡಿ ನಾನು, 'ಇಷ್ಟೊತ್ತು ಹೇಳಿದ್ದು ಕೇವಲ ನನ್ನ ಅಭಿಪ್ರಾಯ ಮಾತ್ರ. ಅದನ್ನು ನೀವು ಒಪ್ಪಬೇಕೆಂದಿಲ್ಲ. ಏಷ್ಟಾದರೂ ಇದು ನಿಮ್ಮಿಬ್ಬರ ದಾಂಪತ್ಯ. ನಾನು ಹೇಳಿದ್ದು ಎಷ್ಟರ ಮಟ್ಟಿಗೆ ಅನ್ವಯವಾಗುತ್ತದೆ ಎನ್ನುವುದು ನನಗಿಂತ ನಿಮಗೇ ಹೆಚ್ಚು ಗೊತ್ತು. ನಿಮಗೆ ಏನೆನ್ನಿಸುತ್ತದೋ ಅದನ್ನು ಹೇಳಬಹುದು.' ಎಂದು ಕಾದೆ.

ಲೋಚನ್ ಕೇಳಿದ: 'ನಮ್ಮ ಸಂಬಂಧವು ಪ್ರೀತಿಯಲ್ಲ, ಕೊರತೆಯಿಂದಾದ ಬೆಸುಗೆ ಎನ್ನುತ್ತಿದ್ದೀರಿ. ನನಗಷ್ಟು ಒಪ್ಪಿಗೆಯಾಗುತ್ತಿಲ್ಲ. ನಮ್ಮಿಬ್ಬರಲ್ಲೂ ಕೊರತೆಗಳಿವೆ, ನಿಜ. ನನ್ನ ಕೊರತೆಯನ್ನು ಅವಳು, ಅವಳ ಕೊರತೆಯನ್ನು ನಾನು ಹೀಗೆ ಭರ್ತಿ ಮಾಡಿದರೆ ಆಗುತ್ತದಲ್ಲವೆ? ನಮ್ಮಮ್ಮ ಹೇಳುತ್ತಿದ್ದ ಕತೆ ನೆನಪಿನಲ್ಲಿದೆ. ಒಬ್ಬ ಕುರುಡ ಹಾಗೂ ಒಬ್ಬ ಹೆಳವ ಒಂದೂರಿಗೆ ನಡೆದು ಹೋಗಬೇಕಾಗಿತ್ತು. ಒಬ್ಬನಿಗೆ ನೋಡಲು, ಇನ್ನೊಬ್ಬನಿಗೆ ನಡೆಯಲು ಆಗುವುದಿಲ್ಲವಲ್ಲ? ಇಬ್ಬರೂ ಸೇರಿ ಒಂದು ಉಪಾಯ ಮಾಡಿದರು. ಹೆಳವ ಕುರುಡನ ಹೆಗಲೇರಿ ಕುಳಿತು ದಾರಿತೋರಿಸಿದ. ಕುರುಡ ಅದರಂತೆ ನಡೆದ. ಇಬ್ಬರೂ ಸುರಕ್ಷಿತವಾಗಿ ಊರು ಸೇರಿದರು. ಇದು ದಾಂಪತ್ಯದಲ್ಲೂ ಯಾಕೆ ನಡೆಯಬಾರದು?'

ನಾನು ಯೋಚಿಸಿ ಹೇಳಿದೆ. 'ಹೌದು, ಖಂಡಿತವಾಗಿಯೂ ಒಳ್ಳೆಯ ಉಪಾಯ ಇದು. ಆದರೆ ಇಲ್ಲಿ ಕೆಲಸ ಮಾಡಿದ್ದು ಅವರ ಕೊರತೆಗಳಲ್ಲ, ಸಾಮರ್ಥ್ಯಗಳು. ಒಬ್ಬರು ನಡೆಯಬಲ್ಲವರಾದರೆ, ಇನ್ನೊಬ್ಬರು ನೋಡಬಲ್ಲವರಾಗಿದ್ದರು. ತಮ್ಮ ಸಾಮರ್ಥ್ಯವನ್ನು ಕೆಲಸಕ್ಕೆ ಹಚ್ಚಿದ್ದರಿಂದಲೇ ಇಬ್ಬರಿಗೂ ಅನುಕೂಲವಾಯಿತು. ಇದಕ್ಕೆ ವ್ಯತಿರಿಕ್ತವಾಗಿ, ಕುರುಡ ಹೆಳವನ ಹೆಗಲೇರಿದ್ದರೆ ಹೇಗಿರುತ್ತಿತ್ತು? ಇನ್ನೊಂದು ಅಂಶ ಏನೆಂದರೆ ಅವರ ಉದ್ದೇಶವು ನಿರ್ದಿಷ್ಟ ಹಾಗೂ ಅಲ್ಪಕಾಲೀನ ಆಗಿತ್ತು. ಅಲ್ಪಕಾಲೀನ ಉದ್ದೇಶಗಳಿಗೆ ಸೂಕ್ತವಾಗುವುದು ದಾಂಪತ್ಯದ ದೀರ್ಘಾವಧಿಗೆ ಸೂಕ್ತವಾಗಬೇಕೆಂದೇನೂ ಇಲ್ಲ' ಅವನಿಗೆ ಅರ್ಥವಾಗಲಿಲ್ಲ. ವಿವರಿಸಿದೆ. 'ಆ ಕತೆಯ ತತ್ವವನ್ನು ದಾಂಪತ್ಯಕ್ಕೆ ಅನ್ವಯಿಸಿಕೊಳ್ಳಿ. ಕಣ್ಣುಕಾಣದ– ಅಂದರೆ ದೂರದೃಷ್ಟಿಯಿಲ್ಲದ– ಗಂಡು, ಹಾಗೂ ನಡೆಯಲಾಗದ– ಅಂದರೆ ಅಸಹಾಯ ಹೆಣ್ಣು ಮದುವೆಯಾಗುತ್ತಾರೆ ಎಂದುಕೊಳ್ಳಿ. ಆಗೇನಾಗಬಹುದು? ದೂರದೃಷ್ಟಿಯಿಲ್ಲದ ಗಂಡ ಹಿಂದೆ ಮುಂದೆ ನೋಡದೆ ಖರ್ಚುಮಾಡುವಾಗ, ಅವಸರದ ನಿರ್ಧಾರಗಳನ್ನು ತೆಗೆದುಕೊಂಡು ಎಡವುವಾಗ ಹೆಂಡತಿ ಅದನ್ನು ತಡೆಯಲು ಹವಣಿಸುತ್ತಾಳೆ. ಆದರೆ ಆಕೆಯ ಅಸಹಾಯ ಮನಸ್ಸಿನ ಕಾರಣದಿಂದ ದೃಢನಿರ್ಧಾರಕ್ಕೆ ಬರಲಾಗದೆ ಕೇವಲ ಗೊಣಗುವುದರಲ್ಲೇ ಇರುತ್ತಾಳೆ. ಯಾವ ನಿರ್ಧಾರಕ್ಕೂ ಬರದೆ ಬರೀ ಗೊಣಗುವ ಹೆಂಡತಿಯನ್ನು ನೋಡಿ ತನ್ನ ನಿರ್ಧಾರವೇ ಸರಿಯೆಂದು ಗಂಡ ಸ್ವೇಚ್ಛಾಚಾರ ಮುಂದುವರಿಸುತ್ತಾನೆ! ಈಗ ಹೇಳಿ, ಒಬ್ಬರ ಕೊರತೆಯನ್ನು ಇನ್ನೊಬ್ಬರು ಸರಿದೂಗಿಸುವ ಜವಾಬ್ದಾರಿ ಎಲ್ಲಿ ಸಾಧ್ಯವಾಯಿತು?'

ಅವರು ನನ್ನನ್ನು ಗಮನವಿಟ್ಟು ಕೇಳುತ್ತಿದ್ದರು. ಯಾಕೆ ಹೀಗಾಗುತ್ತದೆ ಎಂದರೆ, ವೈಯಕ್ತಿಕ ಕೊರತೆಗಳು ಭಾವನಾತ್ಮಕ ಮಟ್ಟದಲ್ಲಿ ಪ್ರಕಟವಾಗುತ್ತ ಇರುತ್ತವೆ. ಉದಾಹರಣೆಗಾಗಿ, 'ಬಾಲ್ಯದಲ್ಲಿ ಹೆತ್ತವರಿಂದ ಪ್ರೀತಿ ಸಿಗಲಿಲ್ಲ. ಅದರ ಕೊರತೆಯನ್ನು ನೀನು ತುಂಬಬೇಕು' ಎಂದು ಒಬ್ಬರು ಆಗ್ರಹಿಸಿದರೆ ಸಂಗಾತಿಯ ಮೇಲೆ ಎಷ್ಟೊಂದು ಒತ್ತಡ ಕೊಡುತ್ತದೆ ಗೊತ್ತಾ? ಅಷ್ಟಕ್ಕೂ, ಎಷ್ಟು ಕೊಟ್ಟರೆ ತುಂಬುತ್ತದೆ ಎನ್ನುವುದು ಗೊತ್ತಿಲ್ಲ. ಹಾಗಾಗಿ ಕೊಡುವವರು ಕೊಡುತ್ತಿರುವಾಗ ಸ್ವೀಕರಿಸುವವರು ಕೈಚಾಚಿಯೇ ಇರುತ್ತಾರೆ. ಕೊನೆಗೆ ಕೊಡುವವರು ಕೈಚೆಲ್ಲುತ್ತಾರೆ. ಮತ್ತೆ ತಕರಾರು ಶುರು.'

ಲೂಸಿ ಮಾತಾಡಿದಳು. 'ತಮ್ಮ ಕೊರತೆಯನ್ನು ನೀಗಿಸಿಕೊಳ್ಳಲು ಅಂಥ ಕೊರತೆಯಿಲ್ಲದ ಸಂಗಾತಿಯನ್ನು ಆರಿಸಿಕೊಳ್ಳಬಹುದಲ್ಲ? ಉದಾಹರಣೆಗೆ, ನನಗೆ ಮುಂಗೋಪ ಇದೆ, ಹಾಗಾಗಿ ತಾಳ್ಮೆಯಿರುವ ಲೋಚನನನ್ನು ಆರಿಸಿಕೊಂಡಿದ್ದೇನೆ ಎಂದಿಟ್ಟುಕೊಳ್ಳಿ. (ಲೋಚನ್ ನಕ್ಕು ತಲೆದೂಗಿದ.) ನಮ್ಮ ಸಂಬಂಧ ಚೆನ್ನಾಗಿರಬಹುದಲ್ಲವೆ?' ನಾನು ಹೇಳಿದೆ. 'ಜಗಳವಾದಾಗ ಲೋಚನ್ ತಾಳ್ಮೆಯಿಂದ ಇರಬೇಕು ಎನ್ನುವ ಒಪ್ಪಂದ ನಿಮ್ಮಲ್ಲಿ ಮುಂಚೆಯೇ ಆಗಿರುತ್ತದೆ – ಲೋಚನ್‌ಗೆ ಸಮಯಪ್ರಜ್ಞೆ ಕಡಿಮೆ ಎನ್ನಿಸಿದರೂ ನೀವು ಒಪ್ಪಿಕೊಂಡಿರಲ್ಲವೆ, ಹಾಗೆ. ಮುಂದೆ ಯಾವೊತ್ತಾದರೂ ನಿಮ್ಮ ಕೋಪಕ್ಕೆ ಪ್ರತಿಯಾಗಿ ಅವರೂ ಕೋಪಿಸಿಕೊಂಡರೆ ಮುಗಿಯಿತು, ಅವರದೇ ತಪ್ಪು ಎನ್ನುತ್ತೀರಿ. ಯಾಕೆ? ನೀವು ಮುಂಗೋಪಿ ಎಂದು ಗೊತ್ತಿದ್ದರೂ ಇಷ್ಟು ವರ್ಷ ಒಪ್ಪಿ ನಡಕೊಂಡಿದ್ದಾರೆ! ಲೋಚನ್ ನಿರುಪಾಯನಾಗಿ ಏನು ಮಾಡಬಹುದು?' ಅವನ ಕಡೆ ನೋಡಿದೆ. ಅವನು ಉತ್ತರಿಸಿದ: 'ಕೋಪವನ್ನು ತೋರಿಸಲಾರೆ ಎನ್ನುವಾಗ ಪ್ರೀತಿಯನ್ನೂ ತೋರಿಸಲಾರೆ!'

'ಇಬ್ಬರ ಭಾವನಾತ್ಮಕ ಕೊರತೆಗಳು ಒಂದಕ್ಕೊಂದು ಪೂರಕವಾಗಿದ್ದರೆ?' ಈ ಪ್ರಶ್ನೆ ಬಂದಿದ್ದು ಲೋಚನನಿಂದ. ಅವನಿನ್ನೂ 'ಕೊರತೆಯ ಕತೆ'ಯಿಂದ ಹೊರಬಂದಿಲ್ಲವೇನೋ? ಕಾಣುತ್ತದೆ. ನಾನು ಉದಾಹರಣೆ ಕೊಟ್ಟೆ. 'ಒಬ್ಬನಿಗೆ ಅನಿಶ್ಚಿತ ಭಾವವಿದ್ದು ಕೂಡಲೇ ನಿರ್ಧಾರಕ್ಕೆ ಬರಲಾಗುವುದಿಲ್ಲ, ಹಾಗಾಗಿ ಥಟ್ಟನೆ ನಿರ್ಧರಿಸುವ ಹುಡುಗಿಯನ್ನು ಮದುವೆಯಾಗುತ್ತಾನೆ ಎಂದುಕೊಳ್ಳಿ. ಪರಿಣಾಮ ಏನಾಗುತ್ತದೆ? ಅವಳು ನಿರ್ಧಾರಕ್ಕೆ ಅವಸರಿಸುವಾಗ ಇವನು ಹಿಂದೆಮುಂದೆ ನೋಡುತ್ತಾನೆ. ಇವನ ಹಿಂದೇಟು ಅವಳ ತಾಳ್ಮೆಗೆಡಿಸುತ್ತದೆ. ಕೊನೆಗೆ, ತನ್ನನ್ನು ಒತ್ತಾಯಿಸುತ್ತಾಳೆಂದು ಗಂಡ, ತನ್ನ ಕಾರ್ಯಕ್ಷಮತೆಗೆ ಅಡ್ಡಿ ಬರುತ್ತಾನೆಂದು ಹೆಂಡತಿ ಜಗಳವಾಡುತ್ತಾರೆ. ಹೊಂದಾಣಿಕೆ ಎಲ್ಲಾಯಿತು?'

'ಒಬ್ಬರು ಮಾತ್ರ ಸಬಲರಾಗಿದ್ದು ಇನ್ನೊಬ್ಬರ ಕೊರತೆಯ ಹೊಣೆ ಹೊತ್ತರೆ?' ಎಂದು ಲೂಸಿ ಕೇಳುವಾಗ ಅದಕ್ಕೆ ಲೋಚನನೂ ತಲೆ ಅಲ್ಲಾಡಿಸಿದ. ಇಬ್ಬರಲ್ಲಿ ಯಾರು ಹೊಣೆ ಹೊರಲು ತಯಾರಾಗಿದ್ದಾರೆ ಎಂದು ಕೇಳಲಿದ್ದವನು ಮನಸ್ಸು ಬದಲಾಯಿಸಿದೆ. 'ಆಗ ಸಂಬಂಧ ಏಕಮುಖವಾಗಿ, ಮುರಿದುಬೀಳುವ ಸಂಭವವಿದೆ.' ಎಂದು ಉದಾಹರಣೆ ಕೊಟ್ಟೆ. 'ಆತ್ಮವಿಶ್ವಾಸ ಕಡಿಮೆ ಇರುವ ಹುಡುಗಿಯನ್ನು ಧೈರ್ಯವಂತ ಹುಡುಗ ಕೈಹಿಡಿಯುತ್ತಾನೆ ಎಂದುಕೊಳ್ಳಿ. ಪರಿಣಾಮ ಏನಾಗುತ್ತದೆ? ಆಕೆ ಆತನಿಲ್ಲದೆ ಒಂದು ಹೆಜ್ಜೆಯನ್ನೂ ಮುಂದಿಡುವುದಿಲ್ಲ. ಆಕೆಯು ತನ್ನ ಸ್ವಂತಿಕೆಯನ್ನು ಬೆಳೆಸಿಕೊಳ್ಳದೆ ಅಸಹಾಯಳಾಗಿ ಅವನೊಂದಿಗೆ ಬೆಸೆದುಕೊಂಡಿರುವುದು ಅವನಿಗೆ ಕಿರಿಕಿರಿಯಾಗುತ್ತದೆ. ಅಷ್ಟೇ ಅಲ್ಲ, ಅವನ ಟ್ರೆಕ್ಕಿಂಗ್ ಮುಂತಾದ ಸಾಹಸಕ್ರೀಡೆಗಳಿಗೆ ಆಕೆ ತಡೆಯೊಡ್ಡಬಹುದು. ಇಲ್ಲೂ ಅಸಮಾಧಾನವೇ ಫಲಶ್ರುತಿಯಾಗುತ್ತದೆ.'

ಲೋಚನ್ ಬಿಟ್ಟುಕೊಟ್ಟ ಭಾವದಿಂದ ಹೇಳಿದ: 'ಅಂದರೆ ಕೊರತೆಗಳು, ದೌರ್ಬಲ್ಯಗಳು ಎಂಥದ್ದೇ ಇರಲಿ, ಸಂಬಂಧದ ಮೇಲೆ ಅಡ್ಡಪರಿಣಾಮ ಮಾಡುತ್ತವೆ ಎನ್ನುತ್ತೀರಿ, ಸರಿ. ಆದರೆ ಎಲ್ಲರಿಗೂ ಕೊರತೆ, ದೌರ್ಬಲ್ಯಗಳು ಇದ್ದೇ ಇರುತ್ತವಲ್ಲವೆ? ಏನು ಮಾಡಬೇಕು?'

ನಾನು ಉತ್ತರಿಸಿದೆ. 'ತಮ್ಮ ಕೊರತೆಗಳ ಹೊಣೆಯನ್ನು ತಾವೇ ಹೊತ್ತು ಸರಿಪಡಿಸಿಕೊಳ್ಳಲು ಯತ್ನಿಸಬೇಕು.'

**ಸೂಚನೆ:** ಓದುಗರು ತಮ್ಮ ಸಮಸ್ಯೆಗಳಿಗೆ ಸಲಹೆ ಬಯಸಿದಲ್ಲಿ ಪತ್ರವನ್ನು ಬರೆಯಬಹುದು. ವಿಳಾಸ: ಸುಖೀ ದಾಂಪತ್ಯ ವಿಭಾಗ, ಸುಧಾ ವಾರಪತ್ರಿಕೆ, 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು 01 ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: www.medisex.org